# ‘ಹಸುರು, ಸ್ವಚ್ಛ, ಆರೋಗ್ಯಕರ ಮಂಗಳೂರು’: ಓಟ ಸ್ಪರ್ಧೆ

**ಮಹಾನಗರ,** ನ. 18: ದಕ್ಷಿಣ ಕನ್ನಡ ಆ್ಯತ್ಲೆಟಿಕ್ಸ್ ಅಸೋಸಿಯೇಶನ್ (ಡಿಕೆಎಎ) ನೇತೃತ್ವದಲ್ಲಿ ಭಂಡಾರಿ ಪ್ರತಿಷ್ಠಾನದ ಸಹಯೋಗದಲ್ಲಿ ‘ಹಸುರು, ಸ್ವಚ್ಛ ಮತ್ತು ಆರೋಗ್ಯಕರ ಮಂಗಳೂರು’ ಪರಿಕಲ್ಪನೆಯೊಂದಿಗೆ ಫೆ. 2ರಂದು ಬೆಳಗ್ಗೆ 6ರಿಂದ ಓಟ ಸ್ಪರ್ಧೆ ಆಯೋಜಿಸಲಾಗಿದೆ.

ಆ್ಯತ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ (ಎಎಫ್ಐ) ಮಾನದಂಡ ಪ್ರಕಾರ ಮತ್ತು ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಶನ್ (ಕೆಎಎ) ಮಾರ್ಗದರ್ಶನದಲ್ಲಿ ಓಟ ಸ್ಪರ್ಧೆ ನಡೆಯಲಿದೆ . 10 ಕೆ (ಪುರುಷರು ಮತ್ತು ಮಹಿಳೆಯರು), 2 ಕೆ (10 ವರ್ಷ ಮೇಲ್ಪಟ್ಟ ಹುಡುಗ ಮತ್ತು ಹುಡುಗಿಯರಿಗೆ– ಭವಿಷ್ಯದ ಚಾಂಪಿಯನ್ಸ್) ಮತ್ತು 5 ಕೆ ಆರೋಗ್ಯಕರ ರನ್ (ಎಲ್ಲರಿಗೂ ಮುಕ್ತ) ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ ಎಂದು ಡಿಕೆಎಎ ಅಧ್ಯಕ್ಷ ಮಂಜುನಾಥ ಭಂಡಾರಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಓಟದ ಕಾರ್ಯಕ್ರಮಕ್ಕೆ ಹೆಸರು, ಲಾಂಛನ ಮತ್ತು ಟ್ಯಾಗ್‌ಲೈನ್ ರಚನೆ ಸಂಬಂಧಿಸಿ ಸಾರ್ವಜನಿಕರಿಂದ ಸಲಹೆ, ಮಾದರಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ಹೆಸರು, ಲಾಂಛನ ಮತ್ತು ಟ್ಯಾಗ್‌ಲೈನ್ ಪ್ರಸ್ತಾವನೆಯನ್ನು ನ. 22ರಂದು ಸಂಜೆ 6 ಗಂಟೆಯ ಮೊದಲು ಸಂಘಟಕರ ಇಮೇಲ್ 10ktwenty20 @gmail.com ವಿಳಾಸಕ್ಕೆ ಕಳುಹಿಸಬಹುದಾಗಿದೆ. ಆಯ್ಕೆಯಾದವರಿಗೆ ಸೂಕ್ತ ಬಹುಮಾನವನ್ನು ನೀಡಲಾಗುವುದು ಎಂದರು.

ಫೆಡರೇಶನ್ ರಾಜ್ಯ ಉಪಾಧ್ಯಕ್ಷ ಸುನಿಲ್‌ಕುಮಾರ್ ಶೆಟ್ಟಿ, ಡಿಕೆಎಎ ಪ್ರಧಾನ ಕಾರ್ಯದರ್ಶಿ ತಾರನಾಥ ಶೆಟ್ಟಿ, ಯು.ಟಿ. ಇಫ್ತಿಕಾರ್ ಅಲಿ, ಕೃಷ್ಣ ಶೆಣೈ, ಕರುಣಾಕರ ಶೆಟ್ಟಿ ಉಪಸ್ಥಿತರಿದ್ದರು.